# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 899 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 14 /03/2025 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಕೆಲಸದ ಸಾಮಾಗ್ರಿಗಳನ್ನು ವಿತರಿಸುವ ಯೋಜನೆ ಜಾರಿಯಲ್ಲಿದೆಯೇ (ಇದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು). | ಹೌದು.<br>ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಫಲಾನುಭವಿಗಳಿಗೆ ಟೂಲ್‌ಕಿಟ್‌ಗಳ ಸೌಲಭ್ಯ ವನ್ನು ವಿತರಿಸುವ ಯೋಜನೆ ಜಾರಿಯಲ್ಲಿದೆ.<br>ಈ ಕೆಳಕಂಡ ವೃತ್ತಿಯ ಟೂಲ್‌ಕಿಟ್‌ಗಳನ್ನು ವಿತರಿಸಲಾಗುತ್ತಿದೆ.<br>ಮೇಸನ್, ಬಾರ್ ಬೆಡಿಂಗ್, ಕಾರ್ಪೆಂಟರಿ, ಎಲೆಕ್ಟ್ರೀಷಿಯನ್, ಪೇಟಿಂಗ್, ಪ್ಲಬಿಂಗ್, ಟೈಲ್ಸ್ ಲೇಯರ್, ವೆಲ್ಡಿಂಗ್, ರೋಡ್ ಕನ್ಸ್‌ಟ್ರಕ್ಷನ್ ಟೂಲ್‌ಕಿಟ್‌ಗಳನ್ನು ವಿತರಿಸಲಾಗಿದೆ. |
| ಆ) | ಸದರಿ ಯೋಜನೆಯಲ್ಲಿ ವಿತರಿಸಲಾಗುತ್ತಿರುವ ಸಾಮಾಗ್ರಿಗಳು ಕಳಪೆ ಮಟ್ಟದ್ದಾಗಿವೆ ಎಂಬ ಆರೋಪಗಳು ಕೇಳಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಕುರಿತು ಇದುವರೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ; | ಸದರಿ ಯೋಜನೆಯಲ್ಲಿ ವಿತರಿಸಲಾಗುತ್ತಿರುವ ಸಾಮಾಗ್ರಿಗಳು ಕಳಪೆ ಮಟ್ಟದ್ದಾಗಿವೆ ಎಂಬ ಆರೋಪಗಳು ಕೇಳಿ ಬರುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿರುವುದಿಲ್ಲ.<br>ಆದಾಗ್ಯೂ, ಮಂಡಳಿಯ ಎಲ್ಲಾ ಯೋಜನೆಗಳನ್ನು ಅನುಷ್ಠಾನ ಮಾಡಲು ಹಾಗೂ ಎಲ್ಲಾ ಖರೀದಿಗಳನ್ನು ಮಾಡಲು ಕೆಟಿಪಿಪಿ ಕಾಯ್ದೆಯನ್ವಯ ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ನಲ್ಲಿ ನಿಯಮಾನುಸಾರ ಟೆಂಡರ್ ಕರೆದು ಪಾರದರ್ಶಕವಾಗಿ ಅರ್ಹ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡು ಯೋಜನೆಗಳನ್ನು ಅನುಷ್ಠಾನ ಮಾಡಲಾಗಿರುತ್ತದೆ.<br>ಕಿಟ್ ಗಳಲ್ಲಿ ನೀಡಬೇಕಾದ ಉಪಕರಣಗಳ Specifications ಗಳನ್ನು ಅಧಿಕೃತ 3ನೇ |

| | | |
|---|---|---|
| | | ವ್ಯಕ್ತಿಯಿಂದ ದೃಢೀಕರಿಸಿ ಪಡೆದುಕೊಳ್ಳಲಾಗುತ್ತಿದೆ. ಆಯ್ಕೆಯಾದ ಸಂಸ್ಥೆಗಳು ಸಮರ್ಪಕವಾಗಿ ಹಾಗೂ ತೃಪ್ತಿಕರವಾಗಿ ಕೆಲಸ ನಿರ್ವಹಿಸಿರುವ ಕಾರ್ಮಿಕ ಇಲಾಖೆಯ ಕ್ಷೇತ್ರಮಟ್ಟದ ಅಧಿಕಾರಿಗಳಿಂದ ದೃಢೀಕರಣವನ್ನು ಪಡೆಯಲಾಗಿರುತ್ತದೆ.<br><br>ಯೋಜನೆ ಅನುಷ್ಠಾನ ಮಾಡುವ ಸಂದರ್ಭದಲ್ಲಿ ಮೂರನೇ ವ್ಯಕ್ತಿ ತಪಾಸಣೆಗೆ ಒಳಪಡಿಸಿ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲಾಗುತ್ತದೆ. |
| ಇ) | ಪ್ರಸ್ತುತ ವಿತರಿಸಲಾಗುತ್ತಿರುವ ಸಾಮಾಗ್ರಿಗಳು ಕಳಪೆ ಮಟ್ಟದ್ದಾಗಿವೆ ಎಂಬ ಆರೋಪ ಕೇಳಿ ಬರುತ್ತಿರುವ ಹಿನ್ನಲೆಯಲ್ಲಿ ಸದರಿ ಕೆಲಸದ ಸಾಮಾಗ್ರಿಗಳನ್ನು "ಈ ವೋಚರ್ ವ್ಯವಸ್ಥೆ"ಯಡಿ ಯಾವುದೇ ಅಂಗಡಿಯಲ್ಲಿ ಖರೀದಿ ಮಾಡುವ ಅವಕಾಶವನ್ನು ಕಲ್ಪಿಸಲು ಸರ್ಕಾರ ಕೂಡಲೇ ಕ್ರಮ ವಹಿಸುವುದೇ? | ಇಲ್ಲ.<br><br>ಕೆ.ಟಿ.ಪಿ.ಪಿ ನಿಯಮಾನುಸಾರ ಪಾರದರ್ಶಕವಾಗಿ ವಿವಿಧ ವೃತ್ತಿಯ ಟೂಲ್‌ಕಿಟ್‌ಗಳನ್ನು ಸರಬರಾಜು ಮಾಡಲು ನಿಯಮಾನುಸಾರ ಇ-ಟೆಂಡರ್ ಕರೆದು ಅರ್ಹ ಸಂಸ್ಥೆಯನ್ನು ಆಯ್ಕೆಮಾಡಿಕೊಳ್ಳಲಾಗುತ್ತಿದೆ.<br><br>ಸದರಿ ಟೂಲ್‌ಕಿಟ್‌ಗಳನ್ನು ಸರಬರಾಜು ಮಾಡುವುದಕ್ಕಿಂತ ಮುಂಚಿತವಾಗಿ ಉತ್ತಮ ಗುಣಮಟ್ಟದ ಬಗ್ಗೆ (as per Technical Specifications) ಮೂರನೇ ವ್ಯಕ್ತಿ ತಪಾಸಣೆಗೆ ಒಳಪಡಿಸಿದ ನಂತರ ಉತ್ತಮ ಗುಣಮಟ್ಟದ ಬಗ್ಗೆ ಮಂಡಳಿಗೆ ವರದಿಯು ಸ್ವೀಕೃತವಾದ ನಂತರ ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ ಸರಬರಾಜು ಮಾಡಲಾಗುತ್ತದೆ. ತದನಂತರ ಸದರಿ ಟೂಲ್‌ಕಿಟ್‌ಗಳನ್ನು ನೋಂದಾಯಿತ ಫಲಾನುಭವಿಗಳಿಗೆ ವಿತರಿಸಲಾಗುವುದು.<br><br>ಟೂಲ್‌ಕಿಟ್‌ಗಳನ್ನು "ಇ-ವೋಚರ್ ವ್ಯವಸ್ಥೆಯ" ಮೂಲಕ ಖರೀದಿ ಮಾಡುವ ಪ್ರಸ್ತಾವನೆ ಈ ಹಂತದಲ್ಲಿ ಮಂಡಳಿಯಲ್ಲಿ ಇರುವುದಿಲ್ಲ. |

**ಕಾಇ 98 ಎಲ್‌ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**